# ಬಟ್ಟೆ ಮೈ ಮುಚ್ಚಬೇಕು

**ಶ್ವೇತಾ ರಾವ್ ಉದಯದ 'ಕ್ಷಮಾ'ದ ಕ್ಷಮಾ**



◆ **ನಿರೂಪಣೆಯ ಒಲವು ಇಲ್ಲಿಗೆ ತಂತಾ?**

ಉದಯ 2ನಲ್ಲಿ ನಿರೂಪಕಿ ಆಗಿದ್ದವಳಿಗೆ ರಿಯಾಲಿಟಿ ಷೋ ಬದುಕಿನಲ್ಲಿ ಭವ್ಯ ಅವಕಾಶದ ಬಾಗಿಲನ್ನೇ ತೆರೆಯಿತು. 'ಪ್ಯಾಟೆ ಹುಡ್ಗೀರ್ ಹಳ್ಳಿ ಲೈಫು–2' ರಲ್ಲಿ ಸ್ಪರ್ಧೆಯಲ್ಲಿ ನಾನು ವಿಜಯಿಯಾದೆ. ನಂತರ 'ಪ್ರಿಯದರ್ಶಿನಿ'ಯಲ್ಲಿ ಪುಟ್ಟ ಪಾತ್ರದ ಮೂಲಕ ಅಭಿನಯಕ್ಕೆ ಪ್ರವೇಶ ಮಾಡಿದೆ. ನಾನು ನಿರ್ದೇಶಕರು ಹೇಳಿದನ್ನು ಕೇಳುತ್ತಲೇ ನಟನೆಯನ್ನು ಕಲಿತಿದ್ದೇನೆ. ಇದಕ್ಕಾಗಿ ಯಾವ ತರಬೇತಿಯನ್ನೂ ತೆಗೆದುಕೊಂಡಿಲ್ಲ. ಅಷ್ಟೇ ಏಕೆ, ಕೊನೆಪಕ್ಷ ಕನ್ನಡಿ ಮುಂದೆ ನಿಂತು ಅನುಕರಣೆಯನ್ನೂ ಮಾಡಲಿಲ್ಲ.

◆ **ಏನಾಗಬಹುದು ಎಂದು ನಿರೀಕ್ಷೆಯಿದೆ?**

ತುಂಬಾ ಕಷ್ಟದಲ್ಲಿ ಬೆಳೆದು ಬಂದಿದ್ದೇನೆ. ಒಳ್ಳೆಯ ನಟಿಯಾಗಿ ಬೆಳೆಯಬೇಕು ಎನ್ನುವುದು ನನ್ನ ಭಾವನೆ. ಕಿರುತೆರೆ ನನಗೆ ಇಷ್ಟ. ವಾರ್ಷಿಕ ಪುರಸ್ಕಾರದಲ್ಲಿ 'ಬೆಸ್ಟ್ ಸೊಸೆ', 'ಬೆಸ್ಟ್ ಅತ್ತೆ', 'ಬೆಸ್ಟ್ ಅತ್ತಿಗೆ', 'ಬೆಸ್ಟ್ ಅಮ್ಮ' ಹೀಗೆ ಒಂದೊಂದೇ ಪುರಸ್ಕಾರವನ್ನು ಪಡೆಯಬೇಕು. ಇಲ್ಲಿ ನಟಿಯಾಗಿ ಮಾತ್ರ ಬೆಳೆಯಲು ಇಷ್ಟಪಡುತ್ತೇನೆ. ಅದನ್ನಷ್ಟೇ ನಾನು ಯೋಚಿಸುವುದು. ಅದಾರಾಚೆಯ ಯಾವ ಸಾಧ್ಯತೆಗಳೂ ನನಗೆ ಇಷ್ಟ ಇಲ್ಲ. ಕೆಲವರು ನನಗೆ ನಿರ್ಮಾಣ ಮಾಡುವ ಬಗ್ಗೆ ಪ್ರೇರೇಪಿಸಿದರು. ನನಗೆ ಅದು ಆಸಕ್ತಿ ಇಲ್ಲ. ಬೆಳೆಸಿಕೊಳ್ಳುವ ಬಯಕೆಯೂ ಇಲ್ಲ.

◆ **ನಿಮ್ಮ ನಟನೆಯ ಪಯಣದಲ್ಲಿ ಅಂತಹ ಕಷ್ಟಗಳು ಏನಿದ್ದವು?**

ನಾನು ತುಮಕೂರಿನವಳು. ನನ್ನ ತಂದೆ ಬಣ್ಣದ ಲೋಕಕ್ಕೆ ಬೆರಗಾಗಬೇಡ ಎಂದು ಬೆದರಿಸುತ್ತಿದ್ದರು. ಅಮ್ಮ ನನ್ನ ಬಯಕೆಯನ್ನು ಪೋಷಿಸಿದರು. ತಂದೆಗೆ ಗೊತ್ತಿಲ್ಲದಂತೆ ಆರಂಭದಲ್ಲಿ ಟೀವಿಗೆ ಬಂದಿದ್ದೂ ಇದೆ. ಕೆಳಮಧ್ಯಮ ಕುಟುಂಬದಲ್ಲಿ ಹುಟ್ಟಿದ್ದರೂ ನನಗೆ ಏನೂ ಕಡಿಮೆಯಾಗದಂತೆ ಮನೆಯಲ್ಲಿ ನೋಡಿಕೊಂಡಿದ್ದರು. 'ಪ್ಯಾಟಿ ಹುಡ್ಗೀರ್ ಹಳ್ಳಿ ಲೈಫು–2' ಗೆದ್ದ ಮೇಲೆ ನಮ್ಮ ಕುಟುಂಬದ ಸ್ಥಿತಿಯೇ ಬದಲಾಯಿತು. ನಮ್ಮನ್ನು ದೂರದಿಂದಲೇ ನೋಡುತ್ತಿದ್ದ ಸಂಬಂಧಗಳು ಹತ್ತಿರವಾದವು. ಮರೆತವರೂ ಆತ್ಮೀಯತೆಯನ್ನು ತೋಡಿಕೊಳ್ಳುವಂತೆ ಆಯಿತು. ಆರ್ಥಿಕವಾಗಿಯೂ ಅದರಿಂದ ಸಾಕಷ್ಟು ಸುಧಾರಣೆ ಆಯಿತು. ದುರದೃಷ್ಟ ಎಂದರೆ ಅಷ್ಟರಲ್ಲಿ ನಮ್ಮ ತಂದೆ ತೀರಿಹೋದರು.

ನಟನೆಯಲ್ಲಿ ಸಂಸಾರ– ಮಗು ಎಂದು ಆಗಾಗ ದೀರ್ಘಕಾಲದ ಬಿಡುವು ತೆಗೆದುಕೊಂಡಾಗ ಮತ್ತೆ ಪ್ರವೇಶ ಮಾಡುವುದು ಕಷ್ಟವಾಗುತ್ತಿತ್ತು. ಆಗೆಲ್ಲ ಇಲ್ಲದ ಸುದ್ದಿ ಹಬ್ಬಿ ಬಿಡುತ್ತಿತ್ತು. 'ಶ್ವೇತಾ ಸ್ವಲ್ಪ ದಿನ ನಟಿಸುವುದಿಲ್ಲವಂತೆ, ಆಕೆ ನಟಿಸುವುದಿಲ್ಲವಂತೆ, ಅವರು ನಟನೆಯನ್ನು ಬಿಟ್ಟಿದ್ದಾರೆ, ಇನ್ಮುಂದೆ ಶ್ವೇತಾ ನಟನೆಯನ್ನೇ ಮಾಡಲ್ಲ' ಎಂಬ ಮಾತು ತೇಲಿ ಬರುತ್ತವೆ. ಅಷ್ಟಾದ ಮೇಲೂ ಬಣ್ಣ ಹಚ್ಚಿದರೆ, 'ಅಯ್ಯೋ ಮತ್ತೇ ಬಂದು ಬಿಟ್ರಾ ಬರಲ್ಲಾ ಅಂದಿದ್ರಂತೆ' ಎನ್ನುವ ಮಾತುಗಳನ್ನು ಕೇಳಿದ್ದೇನೆ. ಆದರೆ ನಾನು ಎಂದೆಂದೂ ನಟಿಯಾಗಿಯೇ ಬೆಳೆಯಲು ಇಷ್ಟಪಡುತ್ತೇನೆ. ಜೀವನ ಸುಂದರವಾಗಿದೆ.

◆ **ಸಿನಿಮಾ ಏಕೆ ಇಷ್ಟ ಆಗಲಿಲ್ಲ?**

ಎರಡರಲ್ಲೂ ಅನುಭವ ಇರುವುದರಿಂದ ಆ ಬಗ್ಗೆ ಖಚಿತವಾಗಿ ಹೇಳಬಲ್ಲೆ. 'ಕಣ್ಣಂಚಲಿ', 'ಒಂದೇ ಒಂದು ಸಾರಿ' ಸಿನಿಮಾ ಮಾಡಿದೆ. ಸಿನಿಮಾ ಮಾಡಬಾರದು ಅಂತ ಏನೂ ಇಲ್ಲ. ಒಳ್ಳೆಯ ಪಾತ್ರ ಸಿಕ್ಕರೆ ಮಾಡುತ್ತೇನೆ. ಆದರೆ ಮೈ ಮುಚ್ಚುವಂತೆ ಬಟ್ಟೆ ತೊಡಬೇಕು. ಎಕ್ಸ್‌ಪೋಸ್ ಡ್ರೆಸ್ ನನಗೆ ಇಷ್ಟ ಆಗಲ್ಲ. ಅದಕ್ಕೆ ಟೀವಿ ಇಷ್ಟ ಆಗುತ್ತೆ.

◆ **ನಿಮ್ಮದೇನು ಲವ್ ಮ್ಯಾರೇಜಾ ಅಥವಾ ಅರೇಂಜ್ಡಾ?**

ಈ ಪ್ರಶ್ನೆಯನ್ನು ತುಂಬ ಜನ ಕೇಳ್ತಾರೆ. ನಮ್ಮದು ಅರೇಂಜ್ಡ್ ಮ್ಯಾರೇಜ್. ನನ್ನ ಪತಿ ಸುನಿಲ್ ಕುಮಾರ್, ಅವರೂ ತುಮಕೂರಿನವರೆ. ಸಾಫ್ಟ್‌ವೇರ್ ಕಂಪನಿಯಲ್ಲಿ ಎಂಜಿನಿಯರ್ ನಮಗೆ ಮೂರು ವರ್ಷದ ಹೆಣ್ಣುಮಗು ಇದೆ. ನಮ್ಮ ಮನೆಯಲ್ಲಿ ನನ್ನನ್ನು ಗಂಡಿನಂತೆಯೇ ಬೆಳೆಸಿದ್ದಾರೆ. ತುಂಬಾ ಬೋಲ್ಡ್ ಯಾವುದಕ್ಕೂ ಹೆದರದ ದಿಟ್ಟತನ ಇದೆ. ಅದನ್ನು ನೋಡಿಯೇ ನಮ್ಮವರು ನನ್ನನ್ನು ಇಷ್ಟಪಟ್ಟಿದ್ದು. ಅವರೂ ನನ್ನ ಕಲೆಯನ್ನು ಪ್ರೋತ್ಸಾಹಿಸುತ್ತಾರೆ. ನನ್ನ ಸ್ವಾತಂತ್ರ್ಯ, ದುಡಿಮೆ ಯಾವುದಕ್ಕೂ ಅವರು ಅಡ್ಡಿಪಡಿಸುವುದಿಲ್ಲ. ಯಾವುದರಲ್ಲೂ ಅವಲಂಬನೆ ಒಳ್ಳೆಯದಲ್ಲ ಎಂದು ಅವರು ಹೇಳುತ್ತಾರೆ.

◆ **ಕ್ಷಮಾ ಹೇಗಿದ್ದಾಳೆ?**

ಪಾಪ... ಎನ್ನುವ ಮರುಕದ ಕಥೆ ಅವಳದು. ತುಂಬ ಮೃದು ಸ್ವಭಾವದ ಹೆಣ್ಣು. ಆಕೆಯ ಗಂಡ 8 ವರ್ಷದ ಹಿಂದೆಯೇ ಬಿಟ್ಟು ಹೋಗಿದ್ದಾನೆ. ಧೈರ್ಯದಿಂದ ಜೀವನವನ್ನು ಆಕೆ ಎದುರಿಸುತ್ತಾಳೆ.

■ **ರಾಘವೇಂದ್ರ ಕೆ.**